**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 143/2019**

**ಸಿಡಬ್ಲೂಃ1 ಪಿ ಡಬ್ಲೂಃ1**

**ಹೆಸರುಃ** ಅಜಂಸಾಬ ಮುಲ್ಲಾ

**ತಂದೆ ಹೆಸರುಃ** ಬಾಷಾಸಾಬ

**ವಯಸ್ಸುಃ** 58 ವರ್ಷಗಳು.

**ಉದ್ಯೋಗಃ** ವ್ಯವಸಾಯ

**ವಾಸ ಸ್ಥಳಃ** ಕಳಸ.

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 09.10.2024**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ2 ಮತ್ತು 3 ನನಗೆ ಪರಿಚಯಸ್ಥರು. ಚಾಸಾಃ4 ನನ್ನ ಹೆಂಡತಿ. ಚಾಸಾಃ5 ನನ್ನ ಮಗ. ಚಾಸಾಃ6 ರಿಂದ 8 ರವರು ನಮ್ಮ ಓಣಿಯವರು. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ 1 ರಿಂದ 3, 8 ರಿಂದ 11 ಹಾಗೂ ನ್ಯಾಯಾಲಯದ ಮುಂದೆ ಈ ದಿನ ಹಾಜರು ಇರದ ಆರೋಪಿ 4 ರಿಂದ 7, 13 ಮತ್ತು ಮೃತ ಆರೋಪಿ 12 ರವರು ನಮ್ಮ ಸಂಬಂಧಿಕರು.

ದಿಃ18.05.2018 ರಂದು ಸಂಜೆ 5ಃ00 ಸಮಯದಲ್ಲಿ ನಾನು ಮನೆಯಲ್ಲಿ ಇದ್ದು, 1 ನೇ ಆರೋಪಿ ನಮ್ಮ ಮನೆಗೆ ಬಂದು ಆಸ್ತಿ ನಮ್ಮದು ಅಂತ ಹೇಳಿ ಏಕಾಏಕೀ ಬಡಿಗೆಯಿಂದ ನನ್ನ ತಲೆಗೆ ಹೊಡೆದನು. ನಾನು 1 ನೇ ಆರೋಪಿಗೆ ಆಸ್ತಿ ನಿನ್ನದಲ್ಲ, ನಮ್ಮದು ಅಂತ ಹೇಳಿದೆ. 1 ನೇ ಆರೋಪಿಗೆ ನಾನು ಆಸ್ತಿ ನಮ್ಮದು ಅಂತ ಹೇಳಿದಾಗ 1 ನೇ ಆರೋಪಿ ಅಣ್ಣತಮ್ಮಂದಿರು, ಅವರ ಹೆಂಡತಿ ಮತ್ತು ಇನ್ನುಳಿದ ಅವರ ಮನೆಯ ಹೆಣ್ಣುಮಕ್ಕಳು ಎಂದರೆ ಆರೋಪಿ 2 ರಿಂದ 11 ಹಾಗೂ 13 ರವರು ಬಂದು ನನ್ನನ್ನು ಹೊಡೆಯಲು ಶುರು ಮಾಡಿದರು. ನಂತರ ನಾನು ನೋಡಿ ನನ್ನನ್ನು ಹೊಡೆಯಬೇಡಿ ಅಂತ ಹೇಳಿದೆ ಅವರು ಕೇಳಲಿಲ್ಲ. ನನ್ನನ್ನು ಹೊಡೆಯುತ್ತಿರುವಾಗ ಚಾಸಾಃ4 ಮತ್ತು 5 ರವರು ಬಡಿಸಲು ಬಂದಾಗ ಆರೋಪಿತರು ಅವರಿಗೆ ನೀವು ಯಾಕೆ ಅವರಿಗೆ ಬಿಡಿಸಲು ಬಂದಿದ್ದೀರಾ ಅಂತ ಹೇಳಿದಾಗ ಅವರು ನಾವು ಓಣಿಯವರು ಆಗಿದ್ದರಿಂದ ಬಂದಿದ್ದೇವೆ ಅಂತ ಹೇಳಿದರು. ಆರೋಪಿತರು ನಮ್ಮನ್ನು ಅವರು ಬಂದಿದ್ದಕ್ಕೆ ಉಳಿದುಕೊಂಡಿದ್ದೀರಾ,

ಇನ್ನೊಂದು ಸಲ ಸಿಕ್ಕರೇ ಜೀವ ಸಮ್ಮೇತ ಬಿಡುವುದಿಲ್ಲ ಅಂತ ಜೀವ ಬೆದರಿಕೆ ಹಾಕಿದ್ದು, ಅದೇ ಸಮಯದಲ್ಲಿ ಚಾಸಾಃ6 ರಿಂದ 8 ರವರು ಸಹ ಜಗಳ ಬಿಡಿಸಲು ಬಂದಿರುತ್ತಾರೆ. ಆರೋಪಿತರು ನನ್ನ ಹೆಂಡತಿಗೂ ಸಹ ಹೊಡೆದಿರುತ್ತಾರೆ. ಈ ರೀತಿ ಆರೋಪಿತರು ನಮ್ಮನ್ನು ಹೊಡೆದಿದ್ದರಿಂದ ನಾನು, ಚಾಸಾಃ4 ಹಾಗೂ 5 ರವರು ಗುಡಗೇರಿ ಸರಕಾರಿ ಆಸ್ಪತ್ರೆಗೆ ಹೋಗಿ ಉಪಚಾರ ಪಡೆದಿರುತ್ತೇವೆ. ನಂತರ ನಾವು ಆರೋಪಿಗಳ ವಿರುದ್ಧ ದೂರನ್ನು ನೀಡಿರುತ್ತೇವೆ.

ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ1 ಎ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

ಸಾಯಂಕಾಲ 6 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದಾಗ 1 ನೇ ಆರೋಪಿ ಬಂದು ಈ ಜಾಗದಲ್ಲಿ ಮನೆ ಕಟ್ಟಲು ಹೋಗ ಬೇಡಿ, ಇದು ನಮಗೆ ಸೇರಿದ್ದು ಅಂತ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ನಂತರ ಇದೆಲ್ಲಾ ಯಾಕೆ ನಾವು ಹಿರಿಯರನ್ನು ಕೂಡಿಸಿ ಮಾತಾಡೋಣಾ ಅಂತ ಹೇಳಿದೆ ಎಂದರೆ ಸರಿ. ಆಗ 1 ನೇ ಆರೋಪಿ ಅವರ ಕೈಯಲ್ಲಿ ಇದ್ದ ಬಡಿಗೆಯಿಂದ ಹೊಡೆದರು ಎಂದರೆ ಸರಿ. ಆಗ ನನ್ನ ತಲೆಗೆ ಗಾಯವಾಗಿ ರಕ್ತ ಬಂದಿರುತ್ತದೆ ಎಂದರೆ ಸರಿ. ನಂತರ 2 ರಿಂದ 13 ನೇ ಆರೋಪಿತರು ಒಟ್ಟಾಗಿ ಬಂದು ನನ್ನನ್ನು ಕೈಯಿಂದ ಸಿಕ್ಕ ಸಿಕ್ಕಲ್ಲಿ ಹೊಡೆ ಬಡೆ ಮಾಡಿ, ಕೆಳಗೆ ಕೆಡವಿ ಕಾಲನಿಂದ ಒದೆಯುವುದು ತುಳಿಯುವುದು ಮಾಡಿದರು ಎಂದರೆ ಸರಿ. ಆಗ ನಾನು ಚೀರಾಡಿದೆ ಎಂದರೆ ಸರಿ. ಆಗ ಚಾಸಾಃ4 ಮತ್ತು 5 ರವರು ಬಂದರು ಎಂದರೆ ಸರಿ. ಅವರು ಬಂದು ಜಗಳ ಬಿಡಿಸಲು ಆರೋಪಿ 8 ರಿಂದ 13 ರವರು ಚಾಸಾಃ4 ಮತ್ತು 5 ರವರಿಗೆ ಅವರ ಕೈಗಳಿಂದ ಹೊಡೆದರು ಎಂದರೆ ಸರಿ. ಆಗ ನಾವೆಲ್ಲರೂ ಚೀರಾಡುವ ಶಬ್ದ ಕೇಳಿ ಚಾಸಾಃ6 ರಿಂದ 8 ರವರು ಬಂದು ಜಗಳವನ್ನು ಬಿಡಿಸಿದರು ಎಂದರೆ ಸರಿ. ನಾನು ನಂತರ ಪುನಃ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಪುನಃ ಹೇಳಿಕೆಯಲ್ಲಿ ಪಂಚನಾಮೆಯನ್ನು ಮಾಡಲು ಸ್ಥಳವನ್ನು ನಾನೇ ತೋರಿಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ನನಗೆ ಹೊಡೆಯಲು ಬಳಸಿದ ಕಾಡುಕಟ್ಟಿಗೆಯನ್ನು ಸಹ ನಾನೇ ತೋರಿಸಿದ್ದೆ

ಎಂದರೆ ಸರಿ. ಈ ಘಟನೆ ನಂತರ ನಾನು ಮತ್ತು ಚಾಸಾಃ4 ರವರು ಗುಡಗೇರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೇವು ಎಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಎಮ್ ಓ ನಂಃ1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಜಿ ಬಿ ಎಸ್ ವಕೀಲರಿಂದ ಆರೋಪಿತರ ಪರ ವಕೀಲರುಃ</u>**

1. ನಮ್ಮ ಮತ್ತು ಆರೋಪಿತರ ನಡುವೆ ಪಟ್ಟಣ ಪಂಚಾಯತಿ ಹಾಗೂ ಈ ನ್ಯಾಯಾಲಯದಲ್ಲಿ ದಿವಾಣಿ ಸ್ವರೂಪದ ವ್ಯಾಜ್ಯಗಳು ಇತ್ಯರ್ಥದ ಹಂತದಲ್ಲಿ ಇವೆ ಎಂದರೆ ಸಾಕ್ಷಿ ಅವು ಡಿಕ್ಲೇರ ಆಗಿದೆ ಎಂದು ನುಡಿಯುತ್ತಾರೆ. ಈ ನ್ಯಾಯಾಲಯದಲ್ಲೂ ಸಹ ದಿವಾಣಿ ವ್ಯಾಜ್ಯಗಳು ವಿಚಾರಣಾ ಬಾಕಿ ಇವೆ ಎಂದರೆ ಸರಿ. ನಿಪಿಃ1 ನ್ನು ನಾನೇ ಹೇಳಿ ಬರೆಸಿರುತ್ತೇನೆ.

2. ನಿಪಿಃ1 ರಲ್ಲಿ ನಾನು ನಮ್ಮ ಮತ್ತು ಆರೋಪಿತರ ನಡುವೆ ನಮ್ಮ ಮನೆಯ ಹಿತ್ತಲದ ಜಾಗೆಯ ಸಲುವಾಗಿ ತಂಟೆ ತಕರಾರು ಆಗುತ್ತಾ ಬಂದಿದ್ದು, ಈ ಬಗ್ಗೆ ನಮ್ಮಲ್ಲಿ ನಾವೇ ಮಾತಾಡಿಕೊಂಡು ಸುಮ್ಮನೇ ಆಗಿದ್ದು ಇರುತ್ತದೆ ಅಂತ ಹೇಳಿ ಬರೆಸಿದ್ದೇನೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ವಿನಾಕಾರಣ  ಹೊಡೆ ಬಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದರು ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

3. ನಾವು ಆರೋಪಿಗಳ ವಿರುದ್ಧ ಖೊಟ್ಟಿ ದೂರು ದಾಖಲಿಸಿದರೆ ಅವರು ರಾಜೀಗೆ ಬರುತ್ತಾರೆ ಅಂತ ಅವರ ವಿರುದ್ಧ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ನಮ್ಮನ್ನು ಕಟ್ಟಿಗೆಯಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಜೀವದ ಬೆದರಿಕೆ ಹಾಕಿದರು ಅಂತ ಸುಳ್ಳು ನುಡಿದಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಹೆಚ್ಚುವರಿ ಹೇಳಿಕೆಯಲ್ಲಿ ನನ್ನ ಮಗನಿಗೆ ಸಣ್ಣ ಪುಟ್ಟ ಗಾಯಗಳು ಆಗಿದ್ದು ಅದರ ಉಪಚಾರವನ್ನು ನಾವು ಮನೆಯಲ್ಲಿಯೇ ಮಾಡಿಕೊಂಡು ಅಂತ ನೀಡಿರುವುದಿಲ್ಲ. ಸದರಿ ಹೇಳಿಕೆಯನ್ನು ನಿಡಿಃ1 ಎಂದು, ಹೇಳಿಕೆಯ ಭಾಗವನ್ನು ನಿಡಿಃ1 ಎ ಎಂದು ಗುರುತಿಸಲಾಯಿತು. ಆರೋಪಿತರು ಯಾವುದೇ ಗುನ್ನಾ ಮಾಡದಿದ್ದರು ಸಹ ಅವರಿಗೆ ಒತ್ತಡ ಹೇರುವ ಉದ್ದೇಶದಿಂದ ಅವರ ವಿರುದ್ಧ ಒಂದು ಖೊಟ್ಟಿ ದೂರನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 143/2019**

**ಸಿಡಬ್ಲ್ಯೂಃ2 ಪಿ ಡಬ್ಲ್ಯೂಃ2**

**ಹೆಸರುಃ** **ರಫೀಕಸಾಬ ಚಾಂದಖಾನವರ**

**ತಂದೆ ಹೆಸರುಃ ಹಜರೇಸಾಬ**

**ವಯಸ್ಸುಃ** **49 ವರ್ಷಗಳು.**

**ಉದ್ಯೋಗಃ** **ವ್ಯವಸಾಯ**

**ವಾಸ ಸ್ಥಳಃ** **ಕಳಸ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 09.10.2024**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಪಂಚನಾಮೆಯಾಗಿದ್ದು ಸಾಕ್ಷಿ ಅದರ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ2 ಎ ಎಂದು, ನಿಪಿಃ2 ಕ್ಕೆ ನಾನು ಚಾಸಾಃ1 ರವರ ಮನೆಯ ಮುಂದೆ 2018 ರಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಪೊಲೀಸರು ಬೆಳಗ್ಗೆ 9ಃ00 ರಿಂದ 10ಃ00 ಗಂಟೆಯವರೆಗೆ ಮಾಡಿರುತ್ತಾರೆ. ಆಗ ನಾನು, ಚಾಸಾಃ1 ಹಾಗೂ ಪೊಲೀಸನವರು ಹಾಜರು ಇದ್ದೇವು. ಪೊಲೀಸನವರು ಪಂಚನಾಮೆ ಮಾಡಿ ಏನೇನು ತೆಗೆದುಕೊಂಡು ಹೋಗಿರುವುದಿಲ್ಲ, ಸಾಕ್ಷಿ ಮುಂದುವರೆದು ಆರೋಪಿತರು ಹಾಗೂ ದೂರುದಾರರ ಇವರ ನಡುವೆ ಆಸ್ತಿ ವಿಚಾರವಾಗಿ ತಂಟೆ ತಕರಾರು ಇರುತ್ತದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ19.05.2018 ರಂದು ಮುಂಜಾನೆ 9ಃ15 ರಿಂದ 10ಃ15 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಒಂದು ಕಾಡು ಕಟ್ಟಿಗೆಯನ್ನು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಕಚ್ಚಾ ಹಾತ್ ನಕಾಶೆಯನ್ನು ಬರೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಜಿ ಬಿ ಎಸ್ ವಕೀಲರಿಂದ ಆರೋಪಿತರ ಪರ ವಕೀಲರುಃ**

1. ಪಿರ್ಯಾಧಿದಾರರು ಮತ್ತು ಆರೋಪಿತರ ನಡುವೆ ಪಟ್ಟಣ ಪಂಚಾಯತಿ ಹಾಗೂ ಈ ನ್ಯಾಯಾಲಯದಲ್ಲಿ ದಿವಾಣಿ ಸ್ವರೂಪದ ವ್ಯಾಜ್ಯಗಳು ಇತ್ಯರ್ಥದ ಹಂತದಲ್ಲಿ ಇವೆ ಎಂದರೆ ಸಾಕ್ಷಿ ಹೌದು, ಆಸ್ತಿ ವಿಚಾರವಾಗಿ ಆಗ ಆಗ ಅವರು ಜಗಳ ಮಾಡುತ್ತಾರೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಪಂಚಾಯತಿ ನಂಬರ ನನಗೆ ಗೊತ್ತಿಲ್ಲ. ನನಗೆ ಘಟನಾ ಸ್ಥಳದ ಚಕ್ಕುಬಂದಿ ಹೇಳಲಾಗುತ್ತೆ ಪೂರ್ವಕ್ಕೆ ಚಾಸಾಃ1 ರವರ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಆರೋಪಿ ಮತ್ತು ಪಿರ್ಯಾದಿದಾರರ ಮನೆಗಳು ಹಾಗೂ ದಕ್ಷಿಣಕ್ಕೆ ಆರೋಪಿತರ ಮನೆಗಳು ಇವೆ ಎಂದು ನುಡಿಯುತ್ತಾರೆ. ನನಗೆ ಪಂಚರಾಗಲು ಯಾರೂ ಕರೆದಿರುವುದಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>**

**<u>ಸಿಸಿ ನಂಃ 143/2019</u>**

**<u>ಸಿಡಬ್ಲೂಃ3 ಪಿ ಡಬ್ಲ್ಯೂಃ3</u>**

**ಹೆಸರುಃ ಪರಸಪ್ಪ**

**ತಂದೆ ಹೆಸರುಃ ಫಕ್ಕೀರಪ್ಪ ನರ್ತೀ**

**ವಯಸ್ಸುಃ 60 ವರ್ಷಗಳು.**

**ಉದ್ಯೋಗಃ ಕೂಲಿ ಕೆಲಸ**

**ವಾಸ ಸ್ಥಳಃ ಕಳಸ.**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 09.10.2024</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಸಾಕ್ಷಿಗೆ ನಿಪಿಃ2 ನ್ನು ತೋರಿಸಿದ್ದು, ಸಾಕ್ಷಿ ಅದರ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿಃ2 ಬಿ ಎಂದು, ನಿಪಿಃ2 ಕ್ಕೆ ನಾನು ಚಾಸಾಃ1 ರವರ ಮನೆಯ ಮುಂದೆ 2018 ರಲ್ಲಿ ಸಹಿ ಮಾಡಿರುತ್ತೇನೆ. ಆಗ ನಾನು, ಚಾಸಾಃ1 ಮತ್ತು 2 ರವರು ಇದ್ದೇವು. ಪಂಚನಾಮೆಯನ್ನು ಎಷ್ಟು ಸಮಯದವರೆಗೆ ಮಾಡಿದ್ದರು ಅಂತ ಗೊತ್ತಿಲ್ಲ. ಪೊಲೀಸನವರು ಪಂಚನಾಮೆ ಮಾಡಿ ಏನೇನು ತೆಗೆದುಕೊಂಡು ಹೋಗಿರುವುದನ್ನು ನಾನು ನೋಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

ದಿಃ19.05.2018 ರಂದು ಮುಂಜಾನೆ 9ಃ15 ರಿಂದ 10ಃ15 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಒಂದು ಕಾಡು ಕಟ್ಟಿಗೆಯನ್ನು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಕಚ್ಚಾ ಹಾತ್ ನಕಾಶೆಯನ್ನು ಬರೆದಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಜಿ ಬಿ ಎಸ್ ವಕೀಲರಿಂದ ಆರೋಪಿತರ ಪರ ವಕೀಲರುಃ</u>**

1. ನಿಪಿಃ2 ರಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ನನಗೆ ನಿಪಿಃ2 ಬರೆದ ತಾರೀಖು ತಿಂಗಳು ಹೇಳಲಾಗುವುದಿಲ್ಲ. ನಿಪಿಃ2 ಕ್ಕೆ ಸಹಿ ಮಾಡಲು ಪೊಲೀಸನವರು ಕರೆದಿರುತ್ತಾರೆ.

ನಾನು ನಿಪಿಃ2 ಕ್ಕೆ ಪೊಲೀಸನವರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**